# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 174 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 11.01.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 174 • PRGI No:KARKAN/2023/88055 • VIJAYANAGARA • 11.01.2025 • Saturday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits



No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು

ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳಿಗಾಗಿ
ಈ ಕೆಳಗಿನ ಕಚೇರಿ
ವಿಳಾಸ ಸಂಪರ್ಕಿಸಿ

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ,
ವಿಜಯನಗರ ಜಿಲ್ಲೆ.

94486 33038
Email: hampitimes@gmail.com


# ಅಲಂಕಾರದಲ್ಲಿ ಕಂಗೊಳಿಸಿದ ಬಾಲಾಜಿ

## ವಿವಿಧೆಡೆ ಶ್ರೀವೆಂಕಟೇಶ್ವರ ಸ್ವಾಮಿಗೆ ಏಕಾದಶಿ ಪೂಜೆ

## ಎಲ್ಲೆಡೆಝೇಂಕರಿಸಿದ ಗೋವಿಂದ ಗೋವಿಂದ...ನಾಮ



■ **ಹಂಪಿ ಟೈಮ್ಸ್ ಹೊಸಪೇಟೆ:** ನಗರದ ಆರ್ಯವೈಶ್ಯ ಸಂಘದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಏಕಾದಶಿ ನಿಮಿತ್ತ ಶುಕ್ರವಾರ ಬೆಳಿಗ್ಗೆ ದೇವರಿಗೆ ಪಂಚಾಮೃತ ಅಭಿಷೇಕ, ವಿಶೇಷ ಪುಷ್ಪ ಹಾಗೂ ರಜತ ಅಲಂಕಾರ ಮಾಡಿ ದೂಪ, ದೀಪ, ನೈವೇಧ್ಯ, ಫಲ, ಶುಷ್ಕಫಲ ಸಮರ್ಪಿಸಲಾಯಿತು. ದೇವರ ದರ್ಶನಕ್ಕಾಗಿ ಭಕ್ತರಿಗೆ ಸುಂದರ ವೈಕುಂಠ ದ್ವಾರ ನಿರ್ಮಿಸಿದ್ದರು. 25000 ಸಾವಿರ ಲಡ್ಡು ಪ್ರಸಾದ ತಯಾರಿಸಿ ಭಕ್ತರಿಗೆ ಉಚಿತವಾಗಿ ನೀಡಲಾಯಿತು. ಬೆಳಿಗ್ಗೆಯಿಂದ ಭಕ್ತರು ಸರದಿಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.









■ **ಹಂಪಿ ಟೈಮ್ಸ್ ಬಳ್ಳಾರಿ**

ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯ ಸೇರಿದಂತೆ ವಿವಿಧ ದೇಗುಲಗಳಲ್ಲಿ ಶನಿವಾರ ವಿವಿಧ ಪೂಜೆಗಳು ವಿಜೃಂಭಣೆಯಿಂದ ನಡೆದವು. ಬೆಳಿಗ್ಗೆಯಿಂದ ರಾತ್ರಿವರೆಗೆ ಭಕ್ತರು ಸರದಿಯಲ್ಲಿ ನಿಂತು ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು.

ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ನಿಮಿತ್ತ ವಿವಿಧ ಪೂಜೆಗಳು ವಿಜೃಂಭಣೆಯಿಂದ ನಡೆದವು. ಬೆಳಿಗ್ಗೆ ಶ್ರೀ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜೆಗಳು, ಸ್ಥಳೀಯ ನಾನಾ ಭಜನಾ ಮಂಡಳಿ ಸದಸ್ಯರಿಂದ ಸಾಮೂಹಿಕ ಭಜನೆ ಮಾಡಲಾಯಿತು. ನಗರ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ನೂರಾರು ಭಕ್ತರು ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದು, ಭಕ್ತಿ ಸಮರ್ಪಿಸಿದರು. ಭಕ್ತರಿಗೆ ದೇವಾಲಯದ ಸಮಿತಿ ಮುಖ್ಯಸ್ಥರು, ಹಾಲು, ಹಣ್ಣು, ಪ್ರಸಾದ ವಿತರಿಸಿದರು. ವೈಕುಂಠ ಏಕಾದಶಿ ಹಿನ್ನೆಲೆ ಇಡಿ ದೇವಾಲಯ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿತ್ತು. ಭಕ್ತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸಮಿತಿಯವರು ವ್ಯವಸ್ಥೆ ಕಲ್ಪಿಸಿದ್ದರು. ಮುಖ್ಯರಸ್ತೆ ಬಳಿ ದೇವಾಲಯ ಇರುವ ಹಿನ್ನೆಲೆ ಸುಗಮ ಸಂಚಾರಕ್ಕೆ, ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಪೋಲೀಸ್ ರನ್ನು ನಿಯೋಜಿಸಲಾಗಿತ್ತು.



## ಮೈಕ್ರೋ ನ್ಯೂಸ್

### ಜ.12 ವಿಜಯನಗರ ಪಿಯು ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ವಿಜಯನಗರ ಪದವಿಪೂರ್ವ ಮಹಾವಿದ್ಯಾಲಯ ವಾರ್ಷಿಕೋತ್ಸವ ಹಾಗೂ 2024-25ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡಿಗೆ ಸಮಾರಂಭ ಜ.12 ಭಾನುವಾರ ಕಾಲೇಜ್ ಆವರಣದಲ್ಲಿ ಜರುಗಲಿದೆ.




ಆಡಳಿತ ಮಂಡಳಿ ಅಧ್ಯಕ್ಷ ಎನ್. ಮಲ್ಲಿಕಾರ್ಜುನಗೌಡ ಉದ್ಘಾಟಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಕೆ.ಮಲ್ಲಿಕಾರ್ಜುನ ಗೌಡ ಅಧ್ಯಕ್ಷತೆವಹಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ನೋಡಲ್ ಅಧಿಕಾರಿ ನಾಗರಾಜ್ ಹವಾಲ್ದಾರ್, ಎಂ.ಡಿ. ಅಲ್ಲಾವುದ್ದೀನ್, ಪ್ರಭು ಗೌಡರು, ಆಡಳಿತ ಮಂಡಳಿ ಸದಸ್ಯರಾದ ನಟರಾಜ ಅಕ್ಕಿ , ಸುನೀಲ್, ತಿಮ್ಮಾರೆಡ್ಡಿ ಉಪಸ್ಥಿತರಿರಲಿದ್ದಾರೆ ಎಂದು ಪ್ರಾಂಶುಪಾಲ ಕೆ.ಮಲ್ಲಿಕಾರ್ಜುನಗೌಡ ತಿಳಿಸಿದ್ದಾರೆ.


ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಬಿ.ಎನ್. ಕಮಲಾಕ್ಷ ಶಾನಭಾಗ್

ಮಾಲೀಕರು, ಹೋಟೇಲ್ ಶಾನಭಾಗ,
ಹೊಸಪೇಟೆ

ಜನನ: 29-12-1939 ನಿಧನ: 10.01.2025

ಸಂತಾಪ ಸೂಚಿಸುವವರು :-
ಕುಟುಂಬದವರು ಹಾಗೂ ಬಂಧು ಮಿತ್ರರು, ಶಾನಭಾಗ ಗ್ರೂಪ್ ಆಫ್ ಹೋಟೇಲ್ಸ್, ಹೊಸಪೇಟೆ

## ಸ್ಟುಡೆಂಟ್ ಕಾಲಂ

### ಸಂಕ್ರಾಂತಿ ಬಂದಿತು, ಖುಷಿಯ ತಂದಿತು



ಸಂಕ್ರಾಂತಿ ಎಂದರೆ ನಮ್ಮೆಲ್ಲರಿಗೂ ಸಡಗರ-ಸಂಭ್ರಮ. ಸುಗ್ಗಿಯ ಪ್ರತೀಕವಾದ ಸಂಕ್ರಾತಿ ನಮಗೆ ಮಹತ್ವದ ಹಬ್ಬ. ಸೂರ್ಯ ತನ್ನ ದಿಕ್ಕನ್ನು ಬದಲಿಸುವ ಈ ದಿನ ನಮ್ಮ ಬದುಕಿನ ದಿಕ್ಕನ್ನು ಪ್ರಗತಿಯತ್ತ ಬದಲಿಸಿಕೊಳ್ಳಲು ಸಂಕಲ್ಪ ಮಾಡುವ ಮಹಾ ಸುದಿನ. ಸಂಕ್ರಾಂತಿಯಂದು ಬೆಳಿಗ್ಗೆ ಸ್ನಾನ ಮಾಡಿದ ನಂತರ ಎಲ್ಲರಿಗೂ ಎಳ್ಳು-ಬೆಲ್ಲವನ್ನು ಕೊಡುತ್ತಾ, 'ಎಳ್ಳು ಬೆಲ್ಲ ತಗಂಡು ಒಳ್ಳೆಯವರಾಗಿರೋಣ' ಎಂದು ಹೇಳುತ್ತಾ ಎಲ್ಲರೊಂದಿಗೂ ಸ್ನೇಹದ ಬಂಧವನ್ನು ವಿಸ್ತರಿಸುವ ದಿನ. ಹಾಗೆಯೇ ದನಕರುಗಳಿಗೆ ಸ್ನಾನ ಮಾಡಿಸಿ ದನ-ಕರುಗಳಿಗೆ ಅಕ್ಕಿ ಬೆಲ್ಲವನ್ನು ತಿನ್ನಿಸುತ್ತಾರೆ. ಹಾಗೆಯೇ ಬಹುತೇಕ ಮನೆಗಳಲ್ಲಿ ಸಿಹಿ ತಿಂಡಿಯನ್ನು ಮಾಡುತ್ತಾರೆ. ಹೆಸರುಬೇಳೆ ಪಾಯಸವನ್ನು ಮಾಡುತ್ತಾರೆ. ಹೊಸದಾಗಿ ಮದುವೆಯಾದವರು ಹೊಸ ಬಟ್ಟೆಯನ್ನು ಧರಿಸಿ ದೇವಸ್ಥಾನಕ್ಕೆ ಹೋಗಿ ದೇವರ ಆಶೀರ್ವಾದ ಪಡೆಯುತ್ತಾರೆ. ಹಿರಿಯರಿಗೆ ನಮಸ್ಕರಿಸಿ ಅವರ ಆಶೀರ್ವಾದ ಪಡೆಯುತ್ತಾರೆ.



ಎಳ್ಳು ಬೆಲ್ಲದ ಜೊತೆಗೆ ಕೊಬ್ಬರಿಯನ್ನು ಸೇರಿಸಿ ಕೊಡಲಾಗುತ್ತದೆ. ಎಳ್ಳು ಬೆಲ್ಲ ಮತ್ತು ಕೊಬ್ಬರಿ ತಿಂದರೆ ಚರ್ಮದ ರೋಗ ಬರುವುದಿಲ್ಲ. ಚಳಿಗಾಲದಲ್ಲಿ ಸುಕ್ಕಾದ ಚರ್ಮ ಹೊಳಪನ್ನು ಪಡೆಯಲು ಎಳ್ಳು, ಕೊಬ್ಬರಿ ಮತ್ತು ಬೆಲ್ಲಗಳ ಮಿಶ್ರಣವು ಸಹಾಯ ಮಾಡುತ್ತದೆ. ಸಂಕ್ರಾಂತಿ ಎಂದರೆ ಎಲ್ಲಾ ರೈತರಿಗೆ ಖುಷಿ ತರುವ ಹಬ್ಬವಾಗಿದೆ. ಹಾಗಾಗಿ ಎಲ್ಲರೂ ಹೊಸ ಬಟ್ಟೆಯನ್ನು ಧರಿಸಿ, ದೇವಸ್ಥಾನಕ್ಕೆ ಹೋಗಿ ಸಿಹಿ ತಿಂಡಿಯನ್ನು ತಿನ್ನುತ್ತಾರೆ. ರೈತನ ಕುಟುಂಬದವರು ಸಮೀಪದ ನದಿಗೆ ಹೋಗಿ ದನ ಕರಗಳಿಗೆ ಸ್ನಾನ ಮಾಡಿಸಿ ದನ ಕರುಗಳಿಗೆ ಅಕ್ಕಿ ಬೆಲ್ಲ ತಿನ್ನಿಸಿಸುವುದರ ಜೊತೆಗೆ ತಾವು ಮಾಡಿರುವಂತಹ ತಿಂಡಿಯನ್ನು ಸಹ ತಿನ್ನಿಸುತ್ತಾರೆ.

ಮಕರ ಸಂಕ್ರಮಣದಂದು 'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡೋಣ' ಎಂದು ಹೇಳುತ್ತಾ ಎಲ್ಲರಿಗೂ ಎಳ್ಳು ಬೆಲ್ಲ ಕೊಡುವುದೇ ಒಂದು ಸಂಭ್ರಮ. ಇದು ಮಕ್ಕಳಾದ ನಮಗೆ ಹೆಚ್ಚು ಖುಷಿ ಕೊಡುವ ಸಂಗತಿ. ಸಂಕ್ರಾಂತಿಯಲ್ಲಿ ದನಕರುಗಳಿಗೆ ಅಲಂಕಾರ ಮಾಡಿ ಪೂಜೆ ಮಾಡುತ್ತಾರೆ. ಕರ್ನಾಟಕದ ಎಲ್ಲರೂ ಇದನ್ನು ಆಚರಿಸುತ್ತಾರೆ. ಇದೊಂದು ಮಹತ್ವದ ಹಬ್ಬ ಎಂದು ಹೇಳುತ್ತಾ ಎಲ್ಲರಿಗೂ ಮಕರ ಸಂಕ್ರಾತಿಯ ಹಾರ್ದಿಕ ಶುಭಾಶಯಗಳು.

**– ಎಸ್. ರೇವತಿ. 9ನೇ ತರಗತಿ.**

**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊಹಳ್ಳಿ(ತಾ)**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಭೂಮಿಗೆ ಇನ್ನೊಂದು ಚಂದ್ರನಿದ್ದರೆ...




ಕಗ್ಗತ್ತಲ, ಕಾರಿರುಳ ಅಮವಾಸೆಯ ರಾತ್ರಿ. ಅಂಗಡಿಯಿಂದ ಮನೆಗೆ ನಡೆದು ಹೊರಟಿದ್ದ ಹರ್ಷ. ಇನ್ನೇನು ಮನೆ ಸಮೀಪಿಸಿತು ಎನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆ ಕರೆಂಟ್ ಹೋಯ್ತು. ತಕ್ಷಣ ರಸ್ತೆ ಹಾಗೂ ವಾತಾವರಣದಲ್ಲೆಲ್ಲಾ ಕತ್ತಲೆ ಆವರಿಸಿತು. ಎಲ್ಲೆಲ್ಲೂ ಕತ್ತಲೇ ಕತ್ತಲು. ಕತ್ತಲೆ ಕಂಡು ಬೆಚ್ಚಿದ ಹರ್ಷ "ಅಪ್ಪಾ,,,," ಎಂದು ಚಿಟ್ಟನೇ ಚೀರಿದ. ಹರ್ಷ ಚೀರಿದ ಧ್ವನಿ ಕೇಳಿದ ತಂದೆ ಕೈಯಲ್ಲಿ ಟಾರ್ಚ್ ಹಿಡಿದು ಹೊರಗೆ ಬಂದರು. 'ಯಾಕೋ! ಹೆದರಿದೆಯಾ?' ಎಂದರು. "ಹೌದಪ್ಪ. ಕರೆಂಟು ಹೋಯ್ತಲ್ಲಾ, ಒಮ್ಮೆಲೆ ಕತ್ತಲೆಯಾಗ್ಬಿಟ್ಟು. ಹೆದರಿಕೆಯಾಗಿ ಕೂಗಿಕೊಂಡೆ" ಎಂದ ಹರ್ಷ. ತಂದೆ ನಡುಗುತ್ತಿರುವ ಅವನ ಕೈಗಳನ್ನ ಹಿಡಿದು ಒಳ ಕರೆದುಕೊಂಡು ಹೋದರು. "ಕತ್ತಲೆಗೆ ಹಾಗೆಲ್ಲಾ ಹೆದರಬಾರದು ಮಗನೆ. ಸ್ವಲ್ಪ ಸಮಯ ನಿಂತಿದ್ದರೆ ಕತ್ತಲೆಯಲ್ಲೂ ಸ್ವಲ್ಪ ಬೆಳಕು ಮೂಡಿ ದಾರಿ ಕಾಣುತ್ತಿತ್ತು" ಎಂದು ಹೆದರಿದ ಮಗನನ್ನು ಸಂತೈಸಿದರು. 'ಅಪ್ಪಾ ಇಂದೇಕೆ ಇಷ್ಟು ಕತ್ತಲಿದೆ? ಅಂದು ನಾವು ಊರಿಂದ ಬರುವಾಗಲೂ ಕರೆಂಟು ಹೋಗಿತ್ತು. ಆದರೂ ಎಷ್ಟೊಂದು ಬೆಳಕಿತ್ತು ಅಲ್ವಾ?'. "ಹೌದಪ್ಪ ಅಂದು ಹುಣ್ಣಿಮೆ ಇತ್ತು. ಹಾಗಾಗಿ ಚಂದ್ರನ ಬೆಳಕಿತ್ತು. ಇಂದು ಅಮವಾಸ್ಯೆ ಆಗಿರುವುದರಿಂದ ಚಂದ್ರನ ಬೆಳಕಿಲ್ಲ. ಹಾಗಾಗಿ ಕತ್ತಲು ಇದೆ" ಎಂದರು ತಂದೆ. 'ಏನೇ ಆಗ್ಲಿ, ಭೂಮಿಗೆ ಇನ್ನೊಂದು ಚಂದ್ರ ಇರಬೇಕಿತ್ತು ಅಲ್ವಾ ಅಪ್ಪಾ' ಎಂದಳು ವರ್ಷ. ಹೌದು ಭೂಮಿಗೆ ಇನ್ನೊಂದು ಚಂದ್ರ ಇದ್ದಿದ್ರೆ ಏನಾಗ್ತಿತ್ತು? ಒಂದಿಷ್ಟು ತಿಳಿಯುವಾ.

ಭೂಮಿ ಎರಡು ಚಂದ್ರರನ್ನು ಹೊಂದಿದ್ದರೆ ಏನಾಗ್ತಿತ್ತು ಎಂಬ ನಿರೀಕ್ಷೆ ನಮ್ಮೆಲ್ಲರದು. ಏಕೆಂದರೆ ಈಗಿರುವ ಚಂದ್ರ ಅಮವಾಸೆಯಂದು ಮರೆಯಾದರೆ ಬೆಳಕು ನೀಡಲು ಇನ್ನೊಂದು ಚಂದ್ರನಿರುತ್ತಾನೆ ಎಂಬ ಆಸೆ ನಮ್ಮದು. ಚಂದ್ರ ಭೂಮಿಯ ಸ್ವಾಭಾವಿಕ ಉಪಗ್ರಹ ಎಂಬುದು ಎಲ್ಲರಿಗೂ ಗೊತ್ತು. ಭೂಮಿಯಂತೆ ಕೆಲವು ಗ್ರಹಗಳಿಗೂ ಸ್ವಾಭಾವಿಕ ಉಪಗ್ರಹಗಳಿವೆ. ನಮ್ಮ ಸೌರವ್ಯೂಹ ವ್ಯವಸ್ಥೆಯಲ್ಲಿ ಎರಡು ನೂರಕ್ಕೂ ಅಧಿಕ ಸ್ವಾಭಾವಿಕ ಉಪಗ್ರಹಗಳಗಳಿವೆ. ಬುಧ ಮತ್ತು ಶುಕ್ರ ಗ್ರಹಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಗ್ರಹಗಳಿಗೂ ಸ್ವಾಭಾವಿಕ ಉಪಗ್ರಹಗಳಿವೆ.



ಆರ್.ಬಿ.ಗುರುಬಸವರಾಜ

ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful

HAMPI TIMES E-paper

ಭೂಮಿಗೆ ಇನ್ನೊಂದು ಚಂದ್ರ ಇದ್ದಿದ್ದರೆ ಸಮುದ್ರದ ಅಲೆಗಳ ಉಬ್ಬರವಿಳಿತ ಇನ್ನಷ್ಟು ಹೆಚ್ಚುತ್ತಿತ್ತು. ಈಗಿರುವ ಚಂದ್ರನ ಗುರುತ್ವ ಬಲಕ್ಕೆ ಹುಣ್ಣಿಮೆಯ ದಿನದಂದು ದೊಡ್ಡದಾದ ಅಲೆಗಳು ಉಂಟಾ \ಗುತ್ತವೆ. ಇನ್ನೊಂದು ಚಂದ್ರನಿದ್ದರೆ ಅಲೆಗಳ ಪ್ರಮಾಣ ಹೆಚ್ಚುತ್ತಿತ್ತು. ಅಲೆ ಗಳು ದೊಡ್ಡದಾದಷ್ಟು ಭೂಮಿಗೆ ಅಪಾಯ ಅಲ್ವೇ? ಕರಾವಳು ಪ್ರದೇಶಗಳು ಪದೇ ಪದೇ ಸಮುದ್ರದ ತೆರೆಗಳ ಹೊಡೆತವನ್ನು ಅನುಭವಿಸು ತ್ತಿದ್ದವು. ಎರಡು ಚಂದ್ರರಿಂದ ಸಮುದ್ರದಲ್ಲಿ ನಿರಂತರ ಉಬ್ಬರವಿಳಿ ತಗಳು ಉಂಟಾಗುತ್ತಿದ್ದವು. ಇದರಿಂದ ಭೂಮಿ ಯ ಮೇಲಿನ ವಾಸಯೋಗ್ಯ ಪ್ರದೇಶ ಕಡಿಮೆಯಾಗುತ್ತಿತ್ತು.

ಭೂಮಿಗೆ ಇನ್ನೊಂದು ಚಂದ್ರನಿದ್ದರೆ ಇಬ್ಬರೂ ಪರಸ್ಪರ ಜಗಳವಾಡುತ್ತಲೇ ಇರುತ್ತಿದ್ದರು. ಜಗಳ ವಿಕೋಪಕ್ಕೆ ಹೋಗಿ ಭೂಮಿಯ ಮೇಲೆ ದುತ್ತೆಂದು ಬೀಳುತ್ತಿದ್ದವು. ಘರ್ಷಣೆ ತೀವ್ರ ಸ್ವರೂಪ ಹೊಂದಿದರೆ ಅಂದರೆ ಪರಸ್ಪರ ಡಿಕ್ಕಿ ಹೊಡೆದ ಪರಿಣಾಮ ಚಂದ್ರರ ಭಗ್ನಾವಶೇಷಗಳು ಭೂಮಿಯ ಮೇಲೆ ಬಿದ್ದು, ಭೂಮಿಯ ಮೇಲ್ಮೈ ಸ್ಥಿತಿ ಅಲ್ಲೋಲಕಲ್ಲೋಲವಾಗುತ್ತಿತ್ತು. ಕೆಲವು ವೇಳೆ ಜಗಳದಿಂದ ಪರಸ್ಪರ ಎರಡೂ ಚಂದ್ರರು ಭೂಮಿಯಿಂದ ದೂರ ಸರಿಯಲೂ ಬಹುದಾಗಿತ್ತು. ಆಗ ಇಬ್ಬರ ಕಕ್ಷಾ ಪಥ ಬೇರೆ ಬೇರೆಯಾಗುತ್ತಿತ್ತು. ಎರಡು ಚಂದ್ರರನ್ನು ನೋಡುವುದು ಕಣ್ಣಿಗೆ ಹಬ್ಬ ಎನಿಸಿದರೂ ಇಬ್ಬರ ನಡುವಿನ ಪರಸ್ಪರ ಜಗಳದಿಂದ ಚಲನೆಯ ವೇಗ ನಿಧಾನವಾಗುತ್ತಿತ್ತು. ಚಾಂದ್ರಮಾಸದ ಲೆಕ್ಕಾಚಾರಕ್ಕೆ ತೊಂದರೆಯಾಗುತ್ತಿತ್ತು.

ಭೂಮಿಗೆ ಇಬ್ಬರು ಚಂದ್ರರಿದ್ದರೆ ಪದೇ ಪದೇ ಗ್ರಹಣಗಳು ಸಂಭವಿಸುತ್ತಿದ್ದವು. ಗ್ರಹಣಗಳು ಸಂಭವಿಸಲು ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ಸರಳ ರೇಖೆಯಲ್ಲಿರಬೇಕು ಎಂಬುದು ನಮಗೀಗಾಲೇ ತಿಳಿದಿದೆ. ಹೀಗೆ ಮೂರೂ ಆಕಾಶಕಾಯಗಳು ಅಪರೂಪಕ್ಕೊಮ್ಮೆ ಒಂದೇ ಸರಳ ರೇಖೆಯಲ್ಲಿ ಬಂದಾಗ ಮಾತ್ರ ಗ್ರಹಣಗಳು ಸಂಭವಿಸುತ್ತವೆ. ಸೂರ್ಯ ಮತ್ತು ಚಂದ್ರರ ನಡುವೆ ಭೂಮಿ ಅಡ್ಡ ಬಂದಾಗ ಚಂದ್ರಗ್ರಹಣವಾಗುತ್ತದೆ. ಹಾಗೆಯೇ ಸೂರ್ಯ ಮತ್ತು ಭೂಮಿಯ ನಡುವೆ ಚಂದ್ರ ಅಡ್ಡ ಬಂದರೆ ಸೂರ್ಯಗ್ರಹಣವಾಗುತ್ತದೆ. ಭೂಮಿ ಮತ್ತು ಈಗಿನ ಚಂದ್ರನ ಚಲನೆಯ ಆಧಾರದ ಮೇಲೆ ಗ್ರಹಣಗಳು ಇಂತಹ ದಿನಂದದೇ ಸಂಭವಿಸುತ್ತವೆ ಎಂದು ಕರಾರುವಕ್ಕಾಗಿ ಲೆಕ್ಕಾಚಾರ ಹಾಕಲಾಗುತ್ತದೆ. ಆದರೆ ಭೂಮಿಗೆ ಇನ್ನೊಂದು ಚಂದ್ರನಿದ್ದರೆ ಗ್ರಹಣದ ಲೆಕ್ಕಾಚಾರ ತಪ್ಪುತ್ತಿತ್ತು. ನಮ್ಮ ಈಗಿನ ಪಂಚಾಂಗ ವ್ಯವಸ್ಥೆ ಅಂದರೆ, ಮಾಸ, ತಿಥಿ, ನಕ್ಷತ್ರ, ಇವುಗಳ ಲೆಕ್ಕಾಚಾರ ಸಂಪೂರ್ಣವಾಗಿ ತದ್ವಿರುದ್ಧವಾಗಿರುತ್ತಿತ್ತು ಅಲ್ಲವೇ?.

## ರಾಷ್ಟ್ರೀಯ ನೇತಾರರ ಚಾರಿತ್ರ್ಯದ ಅಂತಃಶೋಧದ ರಂಗಕೃತಿ

# ಸತ್ಯವನ್ನೇ ಹೇಳುತ್ತೇನೆ

ಅಡ್ಡಂಡ ಕಾರ್ಯಪ್ಪ ಕೊಡಗಿನವರು, ಬಿ.ಎ ಪದವಿ, ನೀ.ನಾ.ಸಂನಲ್ಲಿ ರಂಗಶಿಕ್ಷಣ ಪಡೆದು, ಕೊಡವರಂಗತಂಡದ ಮೂಲಕ 15ವರ್ಷಗಳಿಂದ ನಾಡಿನಾದ್ಯಂತ ನಾಟಕಗಳನ್ನು ಪ್ರದರ್ಶನ ನೀಡಿದವರು. ನಾಟಕ ರಚನೆ, ನಿರ್ದೇಶನ, ಅಭಿನಯದ ಜೊತೆಗೆ ಸಿನಿಮಾ ರಂಗದಲ್ಲಿ ದುಡಿದ ಬಹುಮುಖ ಪ್ರತಿಭೆ. ರಾಜ್ಯಸರಕಾರದ ಕೊಡವ ಅಕಾಡೆಮಿಯ ಅಧ್ಯಕ್ಷರಾಗಿ, ಮೈಸೂರಿನ ರಂಗಾಯಣದ ನಿರ್ದೇಶಕರಾಗಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಸಮ್ಮಾನ್, ಕರ್ನಾಟಕ ರಾಜ್ಯೋತ್ಸವ ಪುರಸ್ಕಾರಗಳನ್ನು ಪಡೆದಿದ್ದಾರೆ.

ಅಡ್ಡಂಡ ಕಾರ್ಯಪ್ಪನವರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ರಾಷ್ಟ್ರನಿರ್ಮಾಣದ ಮಂಚೂಣಿಯಲ್ಲಿದ್ದ ನೇತಾರರು ಹತ್ತು ಹಲವು ಕಾರಣಗಳಿಂದಾಗಿ ಸ್ವಾತಂತ್ರ್ಯೋತ್ತರ ಭಾರತದ ವೈಫಲ್ಯಗಳಿಗೆ ಹೇಗೆ ಹೊಣೆಗಾರರಾಗಿದ್ದಾರೆ ಎನ್ನುವುದರತ್ತ ದೃಷ್ಟಿಹಾಯಿಸುತ್ತದೆ. ವರ್ತಮಾನದ ಭಾರತ ಮತ್ತು ಭಾರತೀಯರ ಜ್ವಲಂತ ಸಮಸ್ಯೆಗಳಿಗೆ ಉತ್ತರ ಹುಡುಕುವ ಪ್ರಯತ್ನಗಳೇ ಈ ನಾಟಕದ ವಸ್ತು, ಹಾಗಾಗಿ ನಾಟಕದಲ್ಲಿ ಕಥೆಯಿಲ್ಲ? ಹಾಗೆ ನೋಡಿದಲ್ಲಿ ಚರಿತ್ರೆಯೂ ಇಲ್ಲಿಲ್ಲ ? ದೇಶದ ಚಾರಿತ್ರಿಕ ತೇಜೋವಧೆಗೈದ ನೇತಾರರ ಕರಿನೆರಳುಗಳಿವೆ, ಭವಿತವ್ಯವನ್ನೇ ನುಂಗಿದ ವಿಷಮ ನೋಟಗಳಿವೆ, ವಿಪರ್ಯಾಸ'ವೆಂದರೆ ಈಗ ಇವರಲ್ಲಿ ಯಾರೊಬ್ಬರೂ ಬದುಕುಳಿದಿಲ್ಲ, ಆದರೂ ಅವರ ಅಂತರಾತ್ಮಗಳನ್ನು ಕೆದಕುವ ಮೂಲಕ ಸತ್ಯಸಂಗತಿಗಳನ್ನು ಅರಿಯುವ ಹಕ್ಕು ಪ್ರತಿಯೊಬ್ಬ ಭಾರತೀಯನ ಹಕ್ಕೆಂಬಂತೆ ನಿರೂಪಿಸುವ ಕ್ರಮ ನಾಟಕದ ನಿರೂಪಣಾ ತಂತ್ರವಾಗಿದೆ. ನಾಟಕದಲ್ಲಿ ಕೋರ್ಟ್ ಕಟಕಟೆಯ ದೃಶ್ಯವೇ ರಂಗಸಜ್ಜಿಕೆ, ಆತ್ಮಸಾಕ್ಷಿಯ ಮಾತುಗಳ ಮೂಲಕ ವಾದರು ಮರೆಮಾಚಲಾದ ಸತ್ಯವನ್ನು ಜನತೆಗೆ ಕೇಳಿಸಬೇಕೆಂಬ ತುಡಿತಗಳಿವೆ. ಇದಕ್ಕಾಗಿ ಸತ್ತ ನೇತಾರರನ್ನು ಎಬ್ಬಿಸಿ ಕರೆತಂದಿದ್ದಾರೆ. ವರ್ತಮಾನದ ಸಮಸ್ಯೆಗಳಿಗೆ ಅವರ ನಡೆಗಳು, ಹೇಯವಾದ, ಹೇವರಿಕೆ, ಹುಟ್ಟಿಸುವ ಸ್ವಾರ್ಥತಂತ್ರಗಳ ಒಳಸುರುಳಿಗಳನ್ನು ಬಯಲಿಗೆಳೆಯುವಲ್ಲಿ ನಾಟಕಕಾರರು ಯಶಸ್ವಿಯಾಗಿದ್ದಾರೆ.




ಡಾ. ಗಿರಿಜಾಪತಿ ಎನ್.ಎಂ.

ಮೈಸೂರು ಮೊ: 9844582238

Scan For Digital Colourful

HAMPI TIMES E-paper

ನಾನು 'ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನಲ್ಲದೇ ಬೇರೆ ಏನನ್ನು ಹೇಳುವುದಿಲ್ಲ, ನಾನು ಹೇಳುತ್ತಿರುವುದೆಲ್ಲ ಸತ್ಯ' ಕೋರ್ಟ್‌ನ ವಿಚಾರಣಾಕಲಾಪದ ಕ್ರಮವೇ ನಾಟಕದ ಶೀರ್ಷಿಕೆ, ಹಾಗಾಗಿ ನಾಟಕದ ಆರಂಭ, ಮುನ್ನಡೆ, ಕೊನೆಗೆ ಮುಕ್ತಾಯದುದ್ದಕ್ಕೂ ವಾಗ್ವಾದಗಳಿವೆ. ಸಂವಾದ ಶೈಲಿ ಕೋರ್ಟ್‌ಕಲಾಪಗಳಿಗೆ ಒಪ್ಪವಾಗುವ ತವಕದಲ್ಲಿದೆ. 80ರದಶಕದಲ್ಲಿ ಕರ್ನಾಟಕದ ನರಗುಂದದಲ್ಲಿ ನಡೆದ ಗೋಲಿಬಾರ್‌ನಲ್ಲಿ ಹುತಾತ್ಮನಾದ ರೈತ ಇಲ್ಲಿನ ನ್ಯಾಯಾಧೀಶ, ವಕೀಲೆ 'ಭಾರತಿ' ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆ. ಇವರು ವರ್ತಮಾನ ಭಾರತದ ವೈಫಲ್ಯತೆಗಳ ಪರಿಣಾಮಕಾರಿ ರೂಪಕವಾಗಬೇಕಿತ್ತು, ಆದರೆ ನಾಟಕಕಾರರ ಪ್ರಧಾನೋದ್ದೇಶ ನೇತಾರರಲ್ಲಿನ ಕುತ್ಸಿತ ರಾಜಕೀಯ ನಡೆಗಳ ಮತ್ತದರ ಚಾರಿತ್ರ್ಯದ ಶೋಧವಾಗಿರುವುದರಿಂದ ಪಠ್ಯದಲ್ಲಿ ಕಲಾತ್ಮಕತೆಯಿಲ್ಲ.




ಪಾತ್ರಗಳಲ್ಲಿ ಗಾಂಧಿ, ನೆಹರೂ, ಪಟೇಲ್, ನೇತಾಜಿ, ಡಾ.ಅಂಬೇಡ್ಕರ್ ಮತ್ತು ವೀರಸಾವರ್ಕರ್ ಇದ್ದಾರೆ. ಇವರಲ್ಲಿ ನೇತಾಜಿಯವರನ್ನು ಹೊರತು ಪಡಿಸಿದರೆ ಉಳಿದವರೆಲ್ಲ ಬ್ಯಾರಿಸ್ಟರ್‌ಗಳಾಗಿದ್ದವರು. ಸ್ವತಂತ್ರ ಭಾರತದ ಕನಸುಕಂಡವರು, ವಿಮೋಚನೆಯ ಚಳವಳಿಗಳಲ್ಲಿ ಮಂಚೂಣಿಯಲ್ಲಿದ್ದವರು. ಸಂವಿಧಾನವನ್ನು ರಾಷ್ಟ್ರಕ್ಕೆ ನೀಡಿದವರು. ಸ್ವಾತಂತ್ರ್ಯೋತ್ತರ ಭಾರತವನ್ನು ಪ್ರೋಜ್ವಲವಾಗಿ ರೂಪಿಸಬೇಕೆಂದು ಬದ್ಧರಾಗಿದ್ದವರು. ಆದರೆ, ತಮ್ಮೊಳಗಿನ ದೌರ್ಬಲ್ಯಗಳಿಗೆ ಜೋತುಬಿದ್ದುದರ ಪರಿಣಾಮ ಅತ್ತ ವ್ಯಕ್ತಿಗತ ಅಸ್ಮಿತೆಗಾಗಿ ತನ್ನ ಕುಟುಂಬವನ್ನೇ ಬಲಿಪಶುವನ್ನಾಗಿ ಮಾಡಿದ ಗಾಂಧಿ, ಎಲ್ಲವು ತನ್ನಿಂದ, ತನಗಾಗಿ, ತನ್ನವರಿಗಾಗೆಂಬಂತೆ ಮೈಮರೆತ ನೆಹರೂ, ಅನಿವಾರ್ಯವಾಗಿ ಗಾಂಧಿಯ ನೆರಳಾಗುವ ಪಾಟೀಲ್, ವಂಚಿತರಾಗುತ್ತಲೇ ಹೋರಾಡಿದ ನೇತಾಜಿ, ದಲಿತರೆಂಬ ಕಾರಣಕ್ಕೆ ಬಳಸಿ ಬೀಸಾಡಿದ ಬಾಳೆಎಲೆಯಂತಾಗುವ ಡಾ. ಅಂಬೇಡ್ಕರ್, ಹಿಂದುತ್ವದ ಉಗ್ರಪ್ರತಿಪಾದಕನೆಂಬ ಹಣೆಪಟ್ಟಿಯ ವೀರಸಾವರ್ಕರ್ ಇವರೆಲ್ಲರ ಅಂತರಾತ್ಮಗಳು ಆತ್ಮಸಾಕ್ಷಿಯ ಕೋರ್ಟ್‌ನಲ್ಲಿ ಮುಖಾಮುಖಿಯಾಗುತ್ತವೆ. ಬ್ರಿಟೀಷರ ಷಡ್ಯಂತ್ರದ ಬಹುಮುಖ್ಯ ತಂತ್ರವಾದ ದೇಶವಿಭಜನೆಯಲ್ಲಿ ಗಾಂಧಿಯ ಪಾತ್ರ, ನೆಹರುರವರ ಸಹಮತ, ಏಕಪಕ್ಷೀಯವಾಗಿ ಮುಸಲ್ಮಾನರತ್ತ ಮೂಡಿದ್ದ ಅನಪೇಕ್ಷಿತ, ಅತಿರೇಕದ ಒಲವುಗಳು ಬಯಲಾದಷ್ಟೂ ಗಾಂಧಿಯೊಳಗಿದ್ದ ಭ್ರಮೆಗಳು ಕಳಚಿಕೊಳ್ಳುತ್ತವೆ. 'ಮುಸಲ್ಮಾನರು ಅವರ ಧರ್ಮವನ್ನು ನಂಬಿದರೇ ಹೊರತು ನನ್ನನ್ನಲ್ಲ' ಎನ್ನುವ ಗಾಂಧಿಯ ಆತ್ಮಸಾಕ್ಷಿಯ ಮಾತುಗಳಿಗೆ ದೇಶವೇ ಬೆಲೆತೆರಬೇಕಾದೀತು ಎಂಬ ದೃಷ್ಟಿಕೋನ ಇರದೇ ಇದ್ದದ್ದು ಅಸಹನೀಯವೆನಿಸುತ್ತದೆ. 'ಅಹಿಂಸಾ ಪರಮೋಧರ್ಮಃವೆಂದು' ಆಗಾಗ ನಾಟಕೀಯವಾಗಿ ಉಚ್ಛರಿಸುವಲ್ಲಿನ ವ್ಯಂಗ್ಯಗಳು ಗಾಂಧಿಯನ್ನೇ ಅಣುಕಿಸುತ್ತವೆ. ಆದರೆ ಇದರಾಚೆಗೂ ಇದ್ದ ಮತ್ತು ಇರುವ ಗಾಂಧಿಯ ಆತ್ಮತುಡಿತಗಳನ್ನು ನಾಟಕ ಬೇಕೆಂದೇ ಕತ್ತಲಲ್ಲಿಡುತ್ತದೆ. ಕಾಮದ ಚರ್ಚೆಯನ್ನೆತ್ತಿಕೊಂಡು 'ಎಲ್ಲವನ್ನು ಬಿಟ್ಟವರೆಂದು' ಗಾಂಧಿಯನ್ನು ಕುಹಕವಾಡುವ ಜಡ್ಜ್, ಕಾಂಗ್ರೆಸ್‌ನ ಪರಂಪರೆ ಮತ್ತು ಪೀಳಿಗೆಯನ್ನು ಕಟಕಟೆಗೆಳೆಯುತ್ತಾರೆ. ಹೀಗೆ ರಾಜಕೀಯ ವಿವಾದಿತ ಪ್ರಯೋಗಗಳು ಹೊಸವೇನಲ್ಲ. ಗಾಂಧೀಜಿಯವರ ಬಗ್ಗೆ ಅತಿ ಹೆಚ್ಚು ಸದ್ದು ಮಾಡಿದ್ದು ಮರಾಠಿ ಲೇಖಕ ಚಂದ್ರಕಾಂತ್ ಕುಲಕರ್ಣಿಯವರ 'ಗಾಂಧಿ ಗಿ/ಖ ಗಾಂಧಿ' ನಾಟಕ, ರಂಜಿಸಹಾನಿಯವರ 'ಒಡಿ.ಉಚಿಟಿಜಿಜ್ಞು' ಲೇಖನಗಳು. (ಮುಂಬೈನ ಇಂಪ್ರಿಂಟ್‌ಮ್ಯಾಗಜೀನ್‌ನಲ್ಲಿ 1960ರ ದಶಕದಲ್ಲಿ ಪ್ರಕಟಗೊಂಡಿವೆ) ನಾನು ಈ ಲೇಖನಗಳನ್ನು 'ಮಿಸ್ಟರ್ ಗಾಂಧಿ' (2021) ಕೃತಿ ರೂಪದಲ್ಲಿ ಹೊರತಂದಿದ್ದೇನೆ. ಅಲ್ಲಿಯೂ ಗಾಂಧಿಯ ಬಗ್ಗೆ ಆಕ್ಷೇಪಗಳಿವೆ. ಗಾಂಧಿಯವರನ್ನು ಮಹಾತ್ಮರೆಂದ ಟಾಗೋರರು ತಾವು ಹಾಗೆ ಕರೆಯಬಾರದಿತ್ತೆಂದು ಪರಿತಪಿಸಿದ್ದಿದೆ.

'ಸಾಮರಸ್ಯದ ನವ್ಯಯುಗಕೆ ನಿಮಗಿದೋ ಆಮಂತ್ರಣ ..' ಹಾಡು, ಡಿ.ವಿ.ಜಿಯವರ ಕಗ್ಗದಪದ್ಯಗಳನ್ನು ನಾಟಕದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಬಳಸಲಾಗಿದೆ. ಆದರೆ ವರ್ತಮಾನದ ಭಾರತಕ್ಕೆ ಯಾವ ಬಗೆಯ ಸಾಮರಸ್ಯದ ನವ್ಯಯುಗದ ನಿರೀಕ್ಷೆ ಕೃತಿಕಾರರಲ್ಲಿದೆ ? ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ನಾನು ನಾಟಕದ ಓದುಗ ಮತ್ತು ಪ್ರೇಕ್ಷಕ ಎರಡೂ ಆಗಿದ್ದೇನೆ. ನಾಟಕ ಕಲಾತ್ಮಕವಾಗಿ ಸೋಲುತ್ತದೆ, ಕಥೆ ಇಲ್ಲದಿರುವುದರಿಂದ ಕಾಡುವುದಿಲ್ಲ, ಬದಲಿಗೆ ರಾಜಕೀಯ ಹಿತಾಸಕ್ತಿಯ ಸಂವಾದಗಳು ಅಧಿಕಾರದ ಗದ್ದುಗೆ ಏರಿದವರಲ್ಲಿ ಅಂದೂ, ಇಂದೂ ಬದಲಾಗದೆ ಉಳಿದಿರುವುದರಿಂದ ಸಂವಾದದ ಕುದಿ ಆವಿಯಾಗುತ್ತದೆ?

ಲೇಖಕರು ಅಂದಿನ ನೇತಾರರನ್ನು ರಂಗದಲ್ಲಿ ತಂದಂತೆ, ಬ್ರಿಟೀಷರ ಮತ್ತು ಪ್ರತ್ಯೇಕರಾಷ್ಟ್ರ ಕಟ್ಟಿಕೊಂಡವರ ಪಾತ್ರಗಳನ್ನು ತಂದಿದ್ದಲ್ಲಿ ನಾಟಕ ಮತ್ತಷ್ಟು ಕಳೆಗಟ್ಟುತ್ತಿತ್ತು. 'ಪ್ರಿಯವಾದ ಸುಳ್ಳು ಮತ್ತು ಅಪ್ರಿಯವಾದ ಸತ್ಯ' ಎರಡನ್ನು ಹೇಳಬಾರದೆಂಬ ನೀತಿಬೋಧೆಯ ನಡುವೆ ರಾಜಕಾರಣದ ಜೀವಂತಿಕೆ ಇದೆ ಎನ್ನುವುದನ್ನು ಮರೆತು, ಜಾಣ್ಮೆಯಿಂದ ನುಸುಳಿಕೊಳ್ಳುವ ಕಾರ್ಯಪ್ಪನವರು ತೀರ್ಪನ್ನು ನೋಡುಗರತ್ತ ತಿರುಗಿಸುತ್ತಾರೆ. ಆದರೆ ಪ್ರಸ್ತುತ ರಾಜಕಾರಣ ಬೇಂದ್ರೆಯವರ ಕುರುಡು ಕಾಂಚಣದಂತೆ ಕುಣಿಯುತ್ತಾ, ತನ್ನತನವನ್ನು ಕುಣಿಸುತ್ತಲೇ ಇದೆ. ಇದಕ್ಕೆಲ್ಲ ಕಡಿವಾಣ ಬೀಳಬೇಕಾದಲ್ಲಿ ಅತ್ತ ಎಡ ಇತ್ತ ಬಲಪಂಥಗಳ ನಡುವೆ ಮಧ್ಯಮಮಾರ್ಗವೊಂದು ತಲೆಯೆತ್ತುವಲ್ಲಿ ಇಡೀ ಭಾರತೀಯರ ಆತ್ಮಸಾಕ್ಷಿ ಜಾಗೃತಗೊಳ್ಳಬೇಕಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮತದ ಮಳೆಗೆ ಕರದ ಬರೆ !!!!

ಮುಗ್ದ ಜನರಿಗೆ ಆಸೆಯ ಶಿಖರವ
ತೋರಿಸಿ;
ತರತರದ ಭರವಸೆಗಳ ಬಣ್ಣದ ಮಾತಿನಲಿ
ಮುಳುಗಿಸಿ;
ಅಭಿವೃದ್ದಿಯೆಂಬ ಬಿಸಿಲುಗುದುರೆಗೆ
ತರಲೆವಾರಿ
ಕರದ ಭಾರವ ಹೊರಿಸಿ
ಬಡವರ ಬೆವರಿನ ಹನಿಗೂ ಕಂದಾಯದ
ಬರೆಯ
ಹಾಕಿಸಿ;...!!!

ದೀನದಲಿತರ ಪರವೆಂದು ಮೊಸಳೆ
ಕಣ್ಣೀರು
ಸುರಿಸಿ;
ಅಧಿಕಾರದ ಮದದಲಿ ಸಿರಿವಂತರ ಮನೆಗೆ
ಕಾವಲಾಗಿಸಿ;
ಕಾವಿಯ ಧರಿಸಿನ ಪ್ರಭೆಯಲಿ
ನ್ಯಾಯಾಂಗವ
ಬಾಗಿಸಿ;
ಜನರ ಕಲ್ಯಾಣವೆಂಬ ಬಿರು ಮಾತಿನ
ಮಳೆಯ
ಚಿಮುಕಿಸಿ;....!!

ಸೌಲಭ್ಯಗಳೆಂಬ ಹೆಸರಲ್ಲಿ ಮುಳ್ಳಿನ ಕೀರಿಟ
ತೋರಿಸಿ;
ವಿವಿಧ ಶುಲ್ಕಗಳ ಬೇಲಿಯ ನಿರ್ಮಿಸಿ
ಬಂಧಿಯಾಗಿ ಸಿ;
ನಾಗರೀಕರ ನರಳುವಂತೆ ಮಾಡಿದ
ಪ್ರಭುತ್ವವ ಬೇಗನೆ
ಕೊನೆಗಾಣಿಸಿ;
ಜನರ ಕಷ್ಟಸುಖಗಳಿಗೆ ಜೊತೆನಿಲ್ಲುವ
ಸೇವಕರಿಗೆ
ಅಧಿಕಾರವ ಕೊಡಿಸಿ...!!

– ಕಾಡಜ್ಜಿ ಮಂಜುನಾಥ

visit our website
www.hampitimes.com
epaper.hampitimes.com

# 1120 ಚೀಲ ಹುಳ ಸಹಿತ ಪಡಿತರ ಜೋಳ ಎರಡು ಲಾರಿಗಳಲ್ಲಿ ಬಳ್ಳಾರಿಗೆ ವಾಪಸ್ಸು

■ ಹಂಪಿ ಟೈಮ್ಸ್ ಕೊಟ್ಟೂರು

ಪಡಿತರ ಅಂಗಡಿಗಳಿಗೆ ವಿತರಿಸಲು 2 ಲಾರಿಗಳಲ್ಲಿ ಬಂದಿದ್ದ ಗುಣಮಟ್ಟ ಇಲ್ಲದ ಜೋಳವನ್ನು ಇಲ್ಲಿನ ಆಹಾರ ನಿರೀಕ್ಷರಾದ ಕಮಲಮ್ಮ ಗುಡ್ಡಪ್ಪರ ಶುಕ್ರವಾರ ವಾಪಸ್ಸು ಕಳುಹಿಸಿದ್ದಾರೆ.
ಬಳ್ಳಾರಿಯ ಕರ್ನಾಟಕ ಅಹಾರ ನಿಗಮದಿಂದ ಜನವರಿ ತಿಂಗಳಲ್ಲಿ ಪಡಿತರ ಅಂಗಡಿಗಳಿಗೆ ವಿತರಿಸಲು ಕೊಟ್ಟೂರು ಎಪಿಎಂಸಿ ಆವರಣ ದೊಳಗಿರುವ ಪಡಿತರ ಅಹಾರ ಸಬರಾಜು ಘಟಕಕ್ಕೆ 2 ಲಾರಿಗಳಲ್ಲಿ ಬಂದಿದ್ದ 1120 ಚೀಲಗಳ ಮೇಲೆ ಹುಳುಗಳು ಓಡಾಡುತ್ತಿರುವುದನ್ನು ಅವಲೋಕಿಸಿದ ಆಹಾರ ನಿರೀಕ್ಷಕರು.
ಆಹಾರ ಧಾನ್ಯಗಳನ್ನು ಪರಿಶೀಲಿಸಿ, ನಿಗಮದ ಅಧಿಕಾರಿಗಳಿಗೆ ವಿಷಯ ತಿಳಿಸಿ ಇಂತಹ ಕಳಪೆಗುಣಮಟ್ಟದ ಆಹಾರ ಧಾನ್ಯಗಳನ್ನು ಪಡಿತರ ಅಂಗಡಿಗಳಿಗೆ ವಿತರಿಸುವುದಿಲ್ಲ. ಆಹಾರ ಧಾನ್ಯಗಳು ಗುಣಮಟ್ಟದಿಂದ ಕೂಡಿದ್ದರೆ ಮಾತ್ರ ಲೋಡ್ ಇಳಿಸಲಾಗುವುದು ಎಂದು ಖಡಕ್ಕಾಗಿ ಎಚ್ಚರಿಸಿ, ತಕ್ಷಣ ಬಂದ ಲಾರಿಗಳಲ್ಲೇ



ಯತಾ ರೀತಿ ವಾಪಸ್ಸು ಕಳುಹಿಸಿದರು.
ಈ ಬಗ್ಗೆ ಹಂಪಿ ಟೈಮ್ಸ್ ಪತ್ರಿಕೆ ಬಳ್ಳಾರಿಯ ಕರ್ನಾಟಕ ಆಹಾರ ನಿಗಮದ ವ್ಯವಸ್ಥಾಪಕರನ್ನು ಕರೆ ಮೂಲಕ ಸಂಪರ್ಕಿಸಿದಾಗ ದಾಸ್ತಾನು ಶೇಖರಿಸಿ 3 ತಿಂಗಳೊಳಗೆ ಜೋಳ ಧಾನ್ಯವನ್ನು ಖಾಲಿ ಮಾಡಬೇಕು,ಆದರೆ ಸರ್ಕಾರ ಆದೇಶ ಕೊಡಲು ವಿಳಂಭ ಮಾಡಿದ ಹಿನ್ನೆಲೆ, ಧಾನ್ಯಕ್ಕೆ ಆ ರೀತಿ ಹುಳ ಆವರಿಸಿದೆ, ಇದು ಕಳೆದ ವರ್ಷದ ಧಾನ್ಯ ಎಂದರು
ಎಷ್ಟು ಗುಣ ಮಟ್ಟದ ಕಳೆದುಕೊಂಡ ಜೋಳದ ಚೀಲಗಳಿವೆ. ಎಷ್ಟು ಈ ಜೋಳವನ್ನು ದಾಸ್ತಾನು ಮಾಡಲಾಗಿತ್ತು ಎಂಬ ಪ್ರಶ್ನೆಗೆ ಬಳ್ಳಾರಿಯ ಕರ್ನಾಟಕ ಆಹಾರ ನಿಗಮದ ವ್ಯವಸ್ಥಾಪಕಿ ಬಿ.ಶರಾವತಿ ಇದೊಂದು ಭೂಕಂಪ,ಸುನಾಮಿ ತರ ಅಕಾಸ್ಮಿಕ ಅವಘಡ, ಇದು ರಾಜ್ಯಕ್ಕೆ ತಿಳಿದ ವಿಷಯ ಈ ಬಗ್ಗೆ ಸುದ್ದಿ ಯಾಕೆ ? ಎಂದು ಹೇಳಿ,ಕೆಲಸ ವಿದೆ ಸ್ವಲ್ಪ ಸಮಯದ ನಂತರ ಮಾಹಿತಿ ಕೊಡುವುದಾಗಿ ಹೇಳಿ ಮಾಹಿತಿಯಿಂದ ನುಣಿಚಿಕೊಂಡರು.

**ಬಳ್ಳಾರಿಯ ಕರ್ನಾಟಕ ಅಹಾರ ನಿಗಮದಿಂದ ಜನವರಿ ತಿಂಗಳಲ್ಲಿ ಪಡಿತರ ಅಂಗಡಿಗಳಿಗೆ ವಿತರಿಸಲು ಕೊಟ್ಟೂರು ಪಡಿತರ ಅಹಾರ ಸಬರಾಜು ಘಟಕಕ್ಕೆ ಹುಳ ಆವರಿಸಿದ ಜೋಳ ಬಂದಿರುವ ಬಗ್ಗೆ ತಿಳಿದು, ಗುಣಮಟ್ಟ ಇಲ್ಲದ ಜೋಳ ಬೇಡ, ಆ ಜೋಳವನ್ನು ವಾಪಸ್ಸು ಕಳುಹಿಸುವಂತೆ ಆಹಾರ ನಿರೀಕ್ಷಕರಿಗೆ ಸೂಚಿಸಿರುವೆ.**

**– ಅಮರೇಶ್ ಜಿ.ಕೆ,**
**ತಹಶಿಲ್ದಾರರು ಕೊಟ್ಟೂರು.**

# ಜ.15 ಉತ್ಪನ್ನಗಳ ವಸ್ತು ಪ್ರದರ್ಶನ–ಮಾರಾಟ ಮೇಳ

■ ಹಂಪಿ ಟೈಮ್ಸ್ ಕೊಪ್ಪಳ

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೊಪ್ಪಳ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ ಮತ್ತು ವಿವಿಧ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ–2025ರ ಅಂಗವಾಗಿ ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿಯಲ್ಲಿ "ಅಸ್ಮಿತೆ" ನಗರ ಮತ್ತು ಗ್ರಾಮೀಣ ಸಂಜೀವಿನಿ ಸ್ವ–ಸಹಾಯ ಗುಂಪುಗಳ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜನವರಿ 15 ರಿಂದ ಜ. 29ರ ವರೆಗೆ ಶ್ರೀ ಗವಿಮಠ ಮಠದ ಜಾತ್ರಾ ಆವರಣದಲ್ಲಿ ಆಯೋಜಿಸಲಾಗಿರುತ್ತದೆ.

ಈ ಮೇಳದಲ್ಲಿ ಸ್ವ ಸಹಾಯ ಸಂಘದಿಂದ ತಯಾರಿಸಲ್ಪಟ್ಟ ಹಾಗೂ ಸ್ವಯಂ ಉದ್ಯೋಗದಲ್ಲಿ ಯಶಸ್ವಿಕಂಡಿರುವ ಸ್ವಯಂ ಉದ್ಯೋಗಿಗಳಿಂದ ತಯಾರಿಸಲ್ಪಟ್ಟ ಆಹಾರ ಉತ್ಪನ್ನಗಳು, ಗೃಹಲಂಕಾರಿಕ ವಸ್ತುಗಳು, ಕೈಮಗ್ಗ, ಸೀರೆ ಮತ್ತು ಜವಳಿ ವಸ್ತುಗಳು, ಬಾಳೆ ನಾರಿನ ಉತ್ಪನ್ನಗಳು, ಚೆನ್ನಪಟ್ಟಣದ ಗೊಂಬೆಗಳು, ಕಿನ್ನಾಳ ಗೂಂಬೆಗಳು, ಬಿದಿರಿನ ಉತ್ಪನ್ನಗಳು, ಗೃಹಬಳಕೆ ವಸ್ತುಗಳಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶದಿಂದ ಹಾಗೂ ರಾಯಚೂರು, ಬಳ್ಳಾರಿ, ಗದಗ, ವಿಜಯಪುರ, ಹಾವೇರಿ, ದಾವಣಗೇರೆ, ರಾಮನಗರ, ದಾರವಾಡ, ಬಾಗಲಕೋಟೆ, ಉತ್ತರ ಕನ್ನಡ, ಚಿತ್ರದುರ್ಗ, ಬೆಳಗಾವಿ, ವಿಜಯನಗರ ಜಿಲ್ಲೆಗಳು ಒಳಗೊಂಡಂತೆ ಸುಮಾರು 100 ಮಳಿಗೆಗಳನ್ನು ತೆರೆಯಲಾಗಿರುತ್ತದೆ.

ಸ್ವ–ಸಹಾಯ ಸಂಘದ ಸದಸ್ಯರುಗಳು ತಯಾರಿಸಿರುವ ಉತ್ಪನ್ನಗಳನ್ನು ಖರೀದಿಸಿ, ಹೆಚ್ಚು ಹೆಚ್ಚು ಪ್ರೋತ್ಸಾಹಿಸುವುದರ ಮೂಲಕ ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳ ಬೇಕೆಂದು ಹಾಗೂ ಸ್ವ–ಸಹಾಯ ಸಂಘ ಸದಸ್ಯರಿಗೆ ಸ್ವಾವಲಂಭಿ ಬದುಕು, ಸಮೃದ್ದಿ ಬದುಕು, ಸಂತೋಷ ಬದುಕು ಕಟ್ಟಿಕೊಳ್ಳಲು ಸಹಕರಿಸ ಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ ಅವರು ತಿಳಿಸಿದ್ದಾರೆ.

## ಜ.18 ರಂದು ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ

■ ಹಂಪಿ ಟೈಮ್ಸ್ ಬಳ್ಳಾರಿ

ವಿಜಯನಗರ ಜಿಲ್ಲೆಯ ಚಿಕ್ಕಜೋಗಿಹಳ್ಳಿಯ ಜವಾಹರ್ ನೆಹರು ನವೋದಯ ಶಾಲೆಯ 2025–26 ನೇ ಸಾಲಿನ ಪ್ರವೇಶ ಪರೀಕ್ಷೆಯ ದಿನಾಂಕ ನಿಗಧಿಯಾಗಿದ್ದು, ಜ.18 ರಂದು ಬೆಳ್ಳಿಗೆ 11 ಗಂಟೆಗೆ ಜಿಲ್ಲೆಯ ಆಯಾ ತಾಲೂಕಿನಲ್ಲಿ ನಿಗದಿಪಡಿಸಿದ ಪರೀಕ್ಷೆ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಚಿಕ್ಕಜೋಗಿಹಳ್ಳಿಯ ಜವಾಹರ್ ನವೋದಯ ವಿದ್ಯಾಲಯದ ಪ್ರಾಚಾರ್ಯರು ತಿಳಿಸಿದ್ದಾರೆ. ವಿದ್ಯಾರ್ಥಿಗಳು ವೆಬ್‌ಸೈಟ್ https://cbseitms.rcil.gov.in/nvs/AdminCard ನಲ್ಲಿ ಪ್ರವೇಶ ಪತ್ರಗಳನ್ನು ಡೌನ್ಲೋಡ್ ಮಾಡಿಕೊಂಡು ಅಗತ್ಯ ದಾಖಲೆಗಳೊಂದಿಗೆ ಪರೀಕ್ಷೆ ಹಾಜರಾಗಬೇಕು ಎಂದು ತಿಳಿಸಿದ್ದಾರೆ.

## ಬ್ಯಾಟರಿ ಚಾಲಿತ ವ್ಹೀಲ್ ಚೇರ್ ವಿತರಣೆ - ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ವಿಕಲಚೇತನ ವ್ಯಕ್ತಿಗಳಿಗೆ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ವಿತರಿಸಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಸೇವಾ–ಸಿಂಧು ತಂತ್ರಾಂಶದಡಿ (ಪೋರ್ಟಲ್) URL:https://suvidha.karnataka.gov.in/ ಗ್ರಾಮಾ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ತಂತ್ರಾಂಶದಲ್ಲಿ ಜ.21 ರೊಳಗಾಗಿ ಅರ್ಜಿ ಸಲ್ಲಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂ.ಆರ್.ಡಬ್ಲ್ಯೂ ಕಾರ್ಯಕರ್ತರ ದೂರವಾಣಿ ಸಂಖ್ಯೆಗಳಾದ ಬಳ್ಳಾರಿ–8880875620, ಸಿರುಗುಪ್ಪ–9743509698, ಸಂಡೂರು–9632052270, ಕುರುಗೋಡು–9538000887 ಮತ್ತು ಕಚೇರಿ ದೂ.08392–267886 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

### ಜ.16 ರಿಂದ 18ರ ವರೆಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಜಿಲ್ಲೆಗೆ ಭೇಟಿ

# ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಸಿದ್ಧರಾಗಿ

### ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ । ಅಧಿಕಾರಿಗಳ ಸಭೆ



■ ಹಂಪಿ ಟೈಮ್ಸ್ ಬಳ್ಳಾರಿ

ಜ.16, 17 ಮತ್ತು 18 ರಂದು ಬಳ್ಳಾರಿ ಜಿಲ್ಲೆಗೆ ಕರ್ನಾಟಕ ಉಪಲೋಕಾಯುಕ್ತ ನ್ಯಾಯ ಮೂರ್ತಿ ಬಿ.ವೀರಪ್ಪ ಅವರು ಭೇಟಿ ನೀಡಲಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗೆ ಸಲ್ಲಿಕೆಯಾದ ಲೋಕಾಯುಕ್ತ ದೂರುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಸಿದ್ದರಿರುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಉಪಲೋಕಾಯುಕ್ತರ ಭೇಟಿ ಹಿನ್ನಲೆಯಲ್ಲಿ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು. ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ದಾಖಲಾದ ದೂರು ಪ್ರಕರಣಗಳ ಕುರಿತು ಜ.18 ರಂದು ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಉಪಲೋಕಾಯುಕ್ತರು ವಿಚಾರಣೆ ನಡೆಸಲಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ದಾಖಲೆ ಹಾಗೂ ಮಾಹಿತಿಯೊಂದಿಗೆ ಹಾಜರಾಗುವಂತೆ ಅವರು ತಿಳಿಸಿದರು.

ಜ.18 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ/ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಲ್ಲಿ (ಈ ಕಚೇರಿಯಿಂದ ನೋಟಿಸ್ ಕಳುಹಿಸಿರುವ) ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸುತ್ತಾರೆ. ಹಾಗಾಗಿ ದೂರುದಾರರು ಮತ್ತು ಎದುರುದಾರರು ನಿಗದಿತ ಸಮಯದಲ್ಲಿ ಹಾಜರಿರಬೇಕಾಗುತ್ತದೆ. ಸಂಬಂದಪಟ್ಟ ಇಲಾಖೆ ಮುಖ್ಯಸ್ಥರು ದೂರುದಾರಿಗೆ ಈ ಕುರಿತು ಮಾಹಿತಿ ನೀಡಿ, ವಿಚಾರಣೆಗೆ ಹಾಜರಾಗುವಂತೆ ತಿಳಿಸಬೇಕು ಎಂದರು.

**ಜ.17 ರಂದು ಸಾರ್ವಜನಿಕರಿಂದ ಅಹವಾಲು ಸ್ವೀಕಾರ:** ಜ.17 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ನಡೆಸುವರು. ಜಿಲ್ಲೆಯಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿ, ನೌಕರರಿಂದ ತಮಗೆ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬವೇನಾದರೂ ಆಗಿದ್ದರೆ ಅಥವಾ ಅಧಿಕಾರಿ, ನೌಕರರು ಯಾವುದೇ ತರಹದ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ,ಅದರಿಂದತೊಂದರೆಗೊಳಗಾದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದ್ದು, ಈ ವೇಳೆ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳದಲ್ಲಿ ಉಪಸ್ಥಿತರಿರಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

**ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರಬೇಕು:** ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಅವರ ಭೇಟಿ ಹಿನ್ನಲೆಯಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ತಪ್ಪದೇ ಕೇಂದ್ರ ಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಿಸಬೇಕು. ಅಧಿಕಾರಿಗಳು ಉಪಲೋಕಾಯುಕ್ತರ ಭೇಟಿ ವೇಳೆ ಗೈರು ಹಾಜರಾಗಿರುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಜ.16 ರಂದು ಉಪಲೋಕಾಯುಕ್ತರು ಜಿಲ್ಲೆಯ ಹಾಸ್ಟೆಲ್, ಕಚೇರಿಗಳು, ಅಂಗನವಾಡಿ ಕೇಂದ್ರ, ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ಪರಿಶೀಲನೆ ನಡೆಸುವರು. ಎಲ್ಲಾ ಅಧಿಕಾರಿಗಳು ತಮ್ಮ ಕಚೇರಿ ಸೇರಿದಂತೆ ಕಚೇರಿ ಆವರಣಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿ.ಸಿದ್ದರಾಜು ಸೇರಿದಂತೆ ಜಿಲ್ಲಾ ಮಟ್ಟದ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು

ನಿಮ್ಮ ಆತ್ಮೀಯರಿಗೆ ಹುಟ್ಟು ಹಬ್ಬದ ಶುಭಾಶಯಗಳು,
ಸಾಧಕರಿಗೆ ಅಭಿನಂದನೆಗಳು, ಸ್ಮರಣೆ ಜಾಹೀರಾತು ನೀಡಲು
ಸಂಪರ್ಕಿಸಿ: ಮೊ: 9448633038 Ads Starts from Rs.1000/-

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ ಹಿಂದಿ**

**पूरक वाचन - नागरिक के कर्तव्य**

**I. दो - तीन वाक्यों में उत्तर लिखिए :**

**1) मीना मैडम ने 15 दिवसीय कार्यशिबिर में किन- किन कार्यक्रमों का आयोजन किया था ?**
**उत्तर :** मीना मैडम ने 15 दिवसीय कार्यशिबिर में कविता-वाचन, कविता-रचना, नाटक-प्रदर्शन, संभाषण-कौशल, टेराकोटा गुडिया बनाना इत्यादि कार्यक्रमों का आयोजन किया था |

**2) अकुल ने मीना मैडम से क्या कहा ?**
**उत्तर :**अकुल ने मीना मैडम से इस तरह कहा है कि - एक नागरिक की हैसियत से हमें अपने देश के राष्ट्रध्वज, राष्ट्रगाना, राष्ट्रीय त्योहार आदि का आदर करना चाहिए |

**3) प्राकृतिक संसाधनों के संरक्षण के बारे में सलमा क्या कहती है ?**
**उत्तर :** प्राकृतिक संसाधनों के संरक्षण के बारे में सलमा इस तरह कहती है कि - प्रकृति हमारी माता है | इसलिए हमें प्राकृतिक संसाधनों का अपव्यय करना नही चाहिए | अपने पर्यावरण को स्वच्छ रखना भी हमारा दायित्व है |

**4) अन्वर ने मीना मैडम से क्या कहा ?**
**उत्तर :** अन्वर ने मीना मैडम से इस तरह कहा है कि - समस्त देशवासियों के प्रति भाई - चारे का भाव रखना और जाति, धर्म, भाषा, प्रदेश, वर्ग पर आधारित सभी भेद-भावों से दूर रहना चाहिए |

**6) नीलिमा ने मीना मैडम से क्या कहा ?**
**उत्तर :** नीलिमा ने मीना मैडम से इस तरह कहा है कि - देश के प्रति गौरव का भाव रखना एवं देश की एकता और अखंडता को कायम रखना हमारा कर्तव्य है |

**7)जार्ज ने मीना मैडम से क्या कहा ?**
**उत्तर :** जार्ज ने मीना मैडम से इस तरह कहा है कि - वैज्ञानिक दृष्टिकोण और सुधार की भावना का विकास करना भी हमारे कर्तव्य है |

**8) मीना मैडम ने छात्रों से अंत में क्या कहा ?**
**उत्तर :** मीना मैडम ने छात्रों से अंत में इस तरह कहा है कि - आज के बच्चे कल के नागरिक है | विद्यार्थियो ! आज से, नही, नही - अब से ही आप अपना कर्तव्यों का पालन करना शुरु कीजिए | इससे आपका हित तो होगा ही, देश का कल्याण भी होगा |

**9) नागरिक के कोई तीन कर्तव्य को लिखिए |**
**उत्तर :**
* देश के राष्ट्रध्वज, राष्ट्रगाना, राष्ट्रीय त्योहार आदि का आदर करना चाहिए |
* वैज्ञानिक दृष्टिकोण और सुधार की भावना होना चाहिए |
* प्राकृतिक संसाधनों का अपव्यय करना नही चाहिए |

---

**व्याकरण** (ಉತ್ತರ ಬರೆದು ಗುರುಗಳಿಗೆ ತೋರಿಸಿ )

**I निम्नलिखित प्रश्नों के लिए चार - चार विकल्प सुझाव गए हैं, उनमें से सर्वाधिक उचित विकल्प चुनकर उसके क्रमाक्षर सहित पूर्ण रूप से लिखिए : 8 x 1 = 8**

1) ' पास ' शब्द का विलोम शब्द है
A) निकट B) समीप C) करीब D) दूर

2) निम्नलिखित में से ' स्त्रीलिंग ' शब्द है -
A) आदमी B) शेर C) हाथी D) बहन

3) निम्नलिखित में से 'एक वचन ' शब्द है
A)कहानियाँ B) लोग C) मछली D) गुफाएँ

4) ' करना ' शब्द का प्रथम प्रेरणार्थक शब्द है -
A) करोना B) कराना C) कर D)करवाना

5) ' पर्वतारोहण ' शब्द में संधि है -
A) गुण B) दीर्घ C) यण् D) व्यंजन

6) ' देशप्रेम ' शब्द में समास है -
A) कर्मधारय B) द्विगु C) तत्पुरुष D) द्वंद्व

7) नही, नही, घबराओ नही । वाक्य में प्रयुक्त विराम चिन्ह है -
A) उद्धरण B) प्रश्नवाचक
C) विस्मयादिबोधक D) अल्प विराम

8) आज ------- युग इंटरनेट युग है ।
A) में B) का इ) को D) के

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಹಂಪಿ ಟೈಮ್ಸ್ ಇ-ಪೇಪರ್

Boost your business growth this new year!

Happy Makar Sankranti

50% off

on print & Digital Package Advertisements*

*Conditions apply


94486 33038

Book a package advertisement now and grab an exclusive discount of up to 50%.

Make your promotions quick, impactful, and eye-catching with this limited-time offer!"

"ಸ್ಥಳೀಯ ಸುದ್ದಿಗಳು ಈಗ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಓದುಗರಿಗೂ ತಲುಪುತ್ತಿವೆ! ನಿಮ್ಮ ಬ್ರ್ಯಾಂಡನ್ನು ಗಡಿಗಳಾಚೆಗೆ ಹರಡುವ ಈ ವಿಶೇಷ ಅವಕಾಶವನ್ನು ಉಪಯೋಗಿಸಿಕೊಳ್ಳಿ!"

ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 10–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.20 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9392 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 73.907 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.99 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.205 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

11–01–2025 – ಶನಿವಾರ

| | |
|---|---|
| ತಿಥಿ | ದ್ವಾದಶಿ/ತ್ರಯೋದಶಿ |
| ಪಕ್ಷ | ಶುಕ್ಲ |
| ನಕ್ಷತ್ರ | ರೋಹಿಣಿ |
| ಯೋಗ | ಶುಕ್ಲ |
| ಕರಣ | ಬಾಳವ |
| ಸೂರ್ಯೋದಯ | 07:11:31 |
| ಸೂರ್ಯಾಸ್ತ | 17:58:30 |
| ರಾಹು ಕಾಲ | 09:53–11:14 |
| ಯಮಘಂಡ ಕಾಲ | 13:56–15:17 |
| ಗುಳಿಕ ಕಾಲ | 07:12–08:32 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ತಿಳಿಪು ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

## ಅಧ್ಯಕ್ಷರಾಗಿ ಆರ್.ಲಿಂಗನಗೌಡ, ಉಪಾಧ್ಯಕ್ಷರಾಗಿ ಎಂ.ರಂಗಯ್ಯ ಅವಿರೋಧ ಆಯ್ಕೆ

ಹಂಪಿ ಟೈಮ್ಸ್ ಕಂಪ್ಲಿ

ತಾಲೂಕಿನ ಹಂಪಾದೇವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಗುರುವಾರ ಚುನಾವಣೆ ನಡೆಯಿತು.




ಅಧ್ಯಕ್ಷರಾಗಿ ಆರ್.ಲಿಂಗನಗೌಡ, ಉಪಾಧ್ಯಕ್ಷರಾಗಿ ಎಂ.ರಂಗಯ್ಯ ಅವಿರೋಧ ಆಯ್ಕೆಗೊಂಡರೆಂದು ಚುನಾವಣಾಧಿಕಾರಿ ಎಸ್.ಈರೇಶ ತಿಳಿಸಿದರು. ಮುಖ್ಯಕಾರ್ಯನಿರ್ವಾಹಕ ಎಚ್.ದೊಡ್ಡ ಬಸಪ್ಪ, ನಿರ್ದೇಶಕರಾದ ಕೆ.ದೊಡ್ಡಬಸಪ್ಪ, ಉಮೇಶಸ್ವಾಮಿ, ಗೋನಾಳ್ ಕೆ.ದೊಡ್ಡಬಸಪ್ಪ, ಮುಸ್ಸಿ ನರಸಪ್ಪ, ಎಚ್.ತಿಪ್ಪೇಸ್ವಾಮಿ, ಎನ್.ಈರಮ್ಮ, ಮಲ್ಲಮ್ಮ, ಉಪ್ಪಾರ ನರಸಮ್ಮ, ಯು.ಶಿವಪ್ಪ, ಜಿ.ಯರ್ರಿಸ್ವಾಮಿ, ಕ್ಷೇತ್ರಾಧಿಕಾರಿ ವಿನೋದ್ ಹಿರೇಮಠ, ಪ್ರಮುಖರಾದ ಎ.ಹುಲುಗಪ್ಪ, ಜೆ.ರಾಮಣ್ಣ, ಜಿ.ಪಂಪಾಪತಿ, ಯು.ಗುರುಮೂರ್ತಿ, ಇಟಗಿಬಸಪ್ಪ, ಎಸ್.ವೆಂಕಟೇಶ, ಬಳ್ಳಾಪುರ ಲಿಂಗಪ್ಪ, ಗೋನಾಳ್ ಹೂವಣ್ಣ, ಬಿ.ಭೀಮಲಿಂಗಪ್ಪ, ಬಂಡಿ ಧನವಂತಪ್ಪ, ಜವುಕು ಬಸವರಾಜ, ಎನ್.ಮಲ್ಲಿಕಾರ್ಜುನ, ರಾಮಲಿಂಗಯ್ಯ, ಎನ್.ಮಾರೆಪ್ಪ, ಬಿ. ಮಾರೆಪ್ಪ, ಪಂಪನಗೌಡ, ಗುತ್ತಿಗೆನೂರು ಮಲ್ಲಿಕಾರ್ಜುನ ಗೌಡ, ಸಿಬ್ಬಂದಿ ಕಮಲರಾಜ, ಚಿದಾನಂದಪ್ಪ, ನಳರಾಜ ಇತರರಿದ್ದರು.

### ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಸಿ ನೆಡೆಯುವ ಕಾರ್ಯಕ್ರಮ: ಚಾಲನೆ

# ಡಿವೈಡರ್‌ನಲ್ಲಿ ಅಲಂಕಾರಿಕ ಸಸಿ



■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ನಗರದ ಹಸಿರೀಕರಣಕ್ಕಾಗಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಮ್ಮಿಕೊಂಡ ಸಸಿ ನಡೆಯುವ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಜಿ ಹಾಗೂ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಶುಕ್ರವಾರ ಜಿಲ್ಲಾಡಳಿತ ಭವನದ ಕಛೇರಿ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಚಾಲನೆ ನೀಡಿದರು.

ಕೊಪ್ಪಳ ನಗರದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯ ಮಧ್ಯದಲ್ಲಿ ಫಾಕ್ಸ್‌ಟೇಲ್ ಪಾಮ್ ಗಿಡಗಳನ್ನು ಜಿಲ್ಲಾಡಳಿತ ಭವನದಿಂದ ಗದಗ ರಸ್ತೆಯ ಮಳೆ ಮಲ್ಲೇಶ್ವರ ದೇವಸ್ಥಾನದವರೆಗೆ ಹಾಗೂ ಗವಿಮಠ ರಸ್ತೆಯ ಮಧ್ಯದಲ್ಲಿರುವ ಡಿವೈಡರ್‌ನಲ್ಲಿ ಅಲಂಕಾರಿಕ ಸಸಿಗಳನ್ನು ನೆಡುವ ಉದ್ದೇಶದೊಂದಿಗೆ ನಗರಾಭಿವೃದ್ಧಿ ಪ್ರಾಧಿಕಾರವು ಈ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಸಂದರ್ಭದಲ್ಲಿ ಕೊಪ್ಪಳ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಯೋಗಾನಂದ ಸೇರಿದಂತೆ ವಿವಿಧ ಇಲಾಖೆಗಳ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಸ್ಥಗಿತಗೊಂಡ ಸಹಕಾರ ಸಂಘಗಳ ಸಮಾಪನೆ : ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

■ ಹಂಪಿ ಟೈಮ್ಸ್ ಬಳ್ಳಾರಿ: ಜಿಲ್ಲೆಯ ಕೆಲವು ಸಹಕಾರ ಸಂಘಗಳು ತಮ್ಮ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ನಿರ್ವಹಿಸದೇ ಸ್ಥಗಿತಗೊಂಡಿದ್ದು, ಆ ಸಂಘಗಳನ್ನು ಸಮಾಪನೆಗೊಳಿಸಲಾಗುವುದು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ.

ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆಗೊಂಡ 07 ದಿನಗಳೊಳಗಾಗಿ ಸಂಘಗಳ ಕಾರ್ಯದರ್ಶಿಯವರಿಂದ,ಸದಸ್ಯರಿಂದ ಅಥವಾ ಯಾರಿಂದಲಾದರೂ ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಈ ಕಚೇರಿಗೆ ಸಲ್ಲಿಸಬೇಕು. ತಪ್ಪಿದಲ್ಲಿ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 72(2) ರನ್ವಯ ಸಮಾಪನೆಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

# ಕೆಪಿಸಿಎಲ್: ಶಿಶಿಕ್ಷು ತರಬೇತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ವತಿಯಿಂದ ಕುಡತಿನಿಯಲ್ಲಿನ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ನಿಗದಿತ ಮಾಸಿಕ ವೇತನದೊಂದಿಗೆ ಒಂದು ವರ್ಷ ಅವಧಿ ಶಿಶಿಕ್ಷು ತರಬೇತಿ ನೀಡಲು ಅರ್ಹ ಗ್ಯಾಜುಯೇಟ್, ಡಿಪ್ಲೋಮಾ ಇಂಜಿನಿಯರಿಂಗ್ ಪೂರ್ಣ ಗೊಳಿಸಿದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು Nats 20 https://nats.education.gov.in ಈ ವೆಬ್‌ಸೈಟ್‌ನಲ್ಲಿ KARNATAKA POWER CORPORATION LIMITED [BTPS] ಎಸ್ಟಾಬ್ಲಿಷ್‌ಮೆಂಟ್ [SKABLS 000001] ಗೆ ಜ.20 ರ ಸಂಜೆ 05 ಗಂಟೆಯೊಳಗಾಗಿ ತಮ್ಮ ವೃತ್ತಿಗನುಗುಣವಾಗಿ ಎಲ್ಲಾ ವಿವರಗಳೊಂದಿಗೆ ಆಯಾ ವೃತ್ತಿಗಳಲ್ಲೇ ಅರ್ಜಿ ಸಲ್ಲಿಸಬೇಕು.

ಶೈಕ್ಷಣಿಕ ವರ್ಷ 2021 ಮತ್ತು ನಂತರದಲ್ಲಿ ಗ್ರಾಜುಯೇಟ್ (ಇಂಜಿನಿಯರಿಂಗ್), ಡಿಪ್ಲೋಮಾ ಇಂಜಿನಿಯರಿಂಗ್ ಉತ್ತೀರ್ಣ ಹೊಂದಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

**ಶಿಶಿಕ್ಷು ವೃತ್ತಿ ಸಂಖ್ಯೆ ಮತ್ತು ಶಿಷ್ಯವೇತನ:**

ಬಿಇ ಸಿವಿಲ್–1, ಬಿಇ ಇ&ಇ–2, ಬಿಇ ಮೆಕ್ಯಾನಿಕಲ್–3, ಬಿಇ ಇನ್‌ಸ್ಟ್ರುಮೆಂಟೇಶನ್–1, ಬಿಇ ಕಂಪ್ಯೂಟರ್ ಸೈನ್ಸ್–1, ಶಿಷ್ಯವೇತನ ರೂ.12 ಸಾವಿರ.

ಡಿಪ್ಲೋಮಾ ಸಿವಿಲ್–1, ಡಿಪ್ಲೋಮಾ ಇ&ಇ–1, ಡಿಪ್ಲೋಮಾ ಮೆಕ್ಯಾನಿಕಲ್–1, ಡಿಪ್ಲೋಮಾ ಕಂಪ್ಯೂಟರ್ ಸೈನ್ಸ್–1, ಡಿಪ್ಲೋಮಾ ಕಮರ್ಷಿಯಲ್ ಪ್ರ್ಯಾಕ್ಟೀಸ್–1. ಶಿಷ್ಯವೇತನ ರೂ.10 ಸಾವಿರ.

**ಬೇಕಾದ ದಾಖಲೆಗಳು:**

ಅಭ್ಯರ್ಥಿಯ ಹೆಸರು, ಆಧಾರ್ ಕಾರ್ಡ್ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ, ವಿದ್ಯಾರ್ಹತೆಯ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ದೈಹಿಕಾ ಕ್ಷಮತಾ ಪತ್ರ, ಇತ್ತೀಚಿ ನಾಲ್ಕು ಭಾವಚಿತ್ರ, ಈ ಮೊದಲು ಶಿಶಿಕ್ಷು ತರಬೇತಿ ಪಡೆದಿದ್ದಲ್ಲಿ ದಾಖಲೆಯ ವಿವರದ ಪ್ರತಿ ಒದಗಿಸಬೇಕು.

**ಇತರೆ ನಿಯಮ:**

ಅಭ್ಯರ್ಥಿಗಳು ಕಡ್ಡಾಯವಾಗಿ ಚಾಲ್ತಿಯಲ್ಲಿರುವ ತಮ್ಮ ಸ್ವಂತ ಇ–ಮೇಲ್ ಐಡಿಯನ್ನು ಮಾತ್ರ ಅರ್ಜಿಯಲ್ಲಿ ಭರ್ತಿ ಮಾಡತಕ್ಕದ್ದು, ತರಬೇತಿಯ ಎಲ್ಲಾ ಪತ್ರ ವ್ಯವಹಾರವನ್ನು ನೀಡಿದಂತಹ ಇ–ಮೇಲ್ ಐಡಿ ಮುಖಾಂತರ ಮಾಡಲಾಗುವುದು. ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಅದರ ಒಂದು ಪ್ರತಿಯನ್ನು ದಾಖಲೆಗಳೊಂದಿಗೆ ಈ ಕಚೇರಿಗೆ ಲಕೋಟೆಯ ಮೇಲೆ "ಶಿಶಿಕ್ಷು ತರಬೇತಿಗಾಗಿ ಅರ್ಜಿ" ಎಂದು ನಮೂದಿಸಿ ಸಲ್ಲಿಸತಕ್ಕದ್ದು, ಆಫ್‌ಲೈನ್ ಮೂಲಕ ಸಲ್ಲಿಸಿದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಈಗಾಗಲೇ ಶಿಶಿಕ್ಷು ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಆನ್‌ಲೈನ್ ಅರ್ಜಿಗಳಲ್ಲಿ ಅಭ್ಯರ್ಥಿಗಳ ಮಾಹಿತಿಯು ಅಪೂರ್ಣವಾಗಿದ್ದಲ್ಲಿ ಅಂತಹ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ.

ಶಿಶಿಕ್ಷು ತರಬೇತಿಗಾಗಿ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಶಿಶಿಕ್ಷು ಅಧಿನಿಯಮದಂತೆ ಕನಿಷ್ಟ 18 ವರ್ಷಗಳ ವಯೋಮಿತಿಯನ್ನು ಹೊಂದಿರಬೇಕು ಹಾಗೂ ಪ.ಜಾತಿ/ಪ. ಪಂಗಡಕ್ಕೆ ಶಿಶಿಕ್ಷು ಕಾಯ್ದೆ ಪ್ರಕಾರ ಮೀಸಲಾತಿ ಇರುತ್ತದೆ. ನಿಗಮದ ಉದ್ಯೋಗಿಗಳ ಮಕ್ಕಳಿಗೆ ಶೇ.25 ರಷ್ಟು ಮೀಸಲಾತಿ ಇರುತ್ತದೆ.

ತರಬೇತಿಯ ಅವಧಿ ಮುಗಿದ ನಂತರ ಶಿಶಿಕ್ಷುಗಳನ್ನು ಕೂಡಲೇ ಬಿಡುಗಡೆಗೊಳಿಸಲಾಗುವುದು ಹಾಗೂ ಯಾವುದೇ ಸಂದರ್ಭದಲ್ಲಿ ಶಿಶಿಕ್ಷುಗಳನ್ನು ನಿಗಮದ ಖಾಯಂ ಸೇವೆಗೆ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕುಡತಿನಿಯ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಕಚೇರಿ ಅಥವಾ ಮೊ.9901340029 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಉಪ ಪ್ರಧಾನ ಸಂಪಾದಕರು ತಿಳಿಸಿದ್ದಾರೆ.

# ವಿ.ಕೃ.ಸ.ಸಂಘಕ್ಕೆ ಅಧ್ಯಕ್ಷರಾಗಿ ಸುರೇಶ ಯಳಕಪ್ಪನವರ ಉಪಾಧ್ಯಕ್ಷೆಯಾಗಿ ಹನುಮಂತಮ್ಮ ಅವಿರೋಧ ಆಯ್ಕೆ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ತಾಲೂಕಿನ ತಂಬ್ರಹಳ್ಳಿ ವಿವಿದೊದ್ದೇಶ ಕೃಷಿ ಸಹಕಾರಿ ಸಂಘದ ಅಧ್ಯಕ್ಷರಾಗಿ ಸುರೇಶ ಯಳಕಪ್ಪನವರ, ಉಪಾಧ್ಯಕ್ಷೆಯಾಗಿ ತಳವಾರ ಹನುಮಂತಮ್ಮ ಪಕ್ಕೀರಪ್ಪ ಅವಿರೋಧವಾಗಿ ಆಯ್ಕೆಯಾದರು.

12 ಸದಸ್ಯರುಳ್ಳ ಸಂಘದಲ್ಲಿ ಚುನಾವಣೆ ಪ್ರಕ್ರಿಯೆಗೆ ಎಲ್ಲಾ ನಿರ್ದೇಶಕರು ಹಾಜರಾಗುವ ಮೂಲಕ ಬಹುಮತವನ್ನು ಸೂಚಿಸಿದರು. ಚುನಾವಣಾಧಿಕಾರಿಯಾಗಿ ಈಶ್ವರ್‌ನಾಯ್ಕ ಕಾರ್ಯ ನಿರ್ವಹಿಸಿದರು.

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಅಕ್ಕಿ ತೋಟೇಶ್, ತಾ.ಪಂ.ಮಾಜಿ ಸದಸ್ಯರಾದ ಪಿ. ಕೊಟ್ರೇಶ, ಪಾಂಡುನಾಯ್ಕ, ಮುಖಂಡರಾದ ಬನ್ನಿಗೋಳ ಆನಂದರೆಡ್ಡಿ, ಪಟ್ಟಣಶೆಟ್ಟಿ ಸುರೇಶ, ಪತ್ರೇಶ್ ಹಿರೇಮಠ, ಗೌರಜ್ಜನವರ ಗಿರೀಶ್, ರೆಡ್ಡಿ ಮಂಜುನಾಥ ಪಾಟೀಲ್, ಕುರಿ ನಾಗರಾಜ್, ಯು.ಪರುಶುರಾಮ, ಪರ್ವತಪ್ಪ, ಜುಂಜನವರ ಮಾರುತೆಪ್ಪ, ನಾಗೇಂದ್ರಪ್ಪ, ಸರಾಯಿ ಮಂಜುನಾಥ, ಬಸಲಿಂಗನಗೌಡ, ಮೇಟಿ ಮಂಜುನಾಥ, ಕಾಶಿಂಸಾಬ್, ರಾಜಭಕ್ಷಿ, ಹೊಟ್ಟಿ ವೀರಣ್ಣ, ಡಿ.ಎಂ.ತೋಟಯ್ಯ, ಕೊರವರ ಯಮನೂರಪ್ಪ, ಗಡ್ಡಿ ನಿಂಗಪ್ಪ, ಸುರೇಶ ಗದ್ದಿಕೇರಿ, ಪಟ್ಟಣಶೆಟ್ಟಿ ಪಕ್ಕೀರಪ್ಪ, ಸಂಘದ ಮುಖ್ಯಕಾರ್ಯನಿರ್ವಾಹಕ ಬಿ.ಬಸವರಾಜ, ಸಿಬ್ಬಂದಿಗಳಾದ ಅಶೋಕ, ಅನುಷಾ, ಪ್ರವೀಣ, ರಂಗನಾಥ, ನಿರ್ದೇಶಕರಾದ ಮೈನಳ್ಳಿ ಸೌಭಾಗ್ಯ ಸುರೇಶ, ಗಡ್ಡಿ ಮಲ್ಲಿಕಾರ್ಜುನ, ಗೊಂದಿ ವಿರುಪಾಕ್ಷಪ್ಪ, ಕುರಿ ಶಿವಮೂರ್ತಿ, ಶಂಕ್ರಯ್ಯ, ಹುಲಿ ವೆಂಕೋಬಪ್ಪ, ಪಿ.ರಾಮನಮಲಿ, ಖಾದರ್‌ಸಾಬ್, ಮೈನಳ್ಳಿ ಕೊಟ್ರೇಶ, ದುರುಗಮ್ಮ ಇದ್ದರು.


## ಉದ್ಯಮಿ ಕಮಲಾಕ್ಷ ಶ್ಯಾನಭಾಗ ನಿಧನ



**ಹೊಸಪೇಟೆ:** ನಗರದ ಹಿರಿಯ ಹೋಟೆಲ್ ಉದ್ಯಮಿ, ಶ್ಯಾನಭಾಗ ಇಂಟರ್‌ನ್ಯಾಷನಲ್ ಹೋಟೆಲ್ ಮಾಲೀಕರಾದ ಶ್ರೀ ಬಿ.ಎನ್.ಕಮಲಾಕ್ಷ ಶ್ಯಾನಭಾಗ (85) ಇವರು ಶುಕ್ರವಾರ ವೈಕುಂಠ ಏಕಾದಶಿಯಂದು ನಿಧನರಾಗಿದ್ದಾರೆ.

ಮೃತರು ಲಯನ್ಸ್ ಕ್ಲಬ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ವಂಚಿತ ಮಕ್ಕಳಿಗೆ ಶಿಕ್ಷಣ, ದಾಸೋಹ ಕಲ್ಪಿಸಿದ್ದರು. ಮೃತರಿಗೆ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ಮುಕ್ತಿಧಾಮದಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ಜರುಗಲಿದೆ ಎಂದು ತಿಳಿಸಿದ್ದಾರೆ.

## ಆನಂದ ಬಾಣ




## ಅಲ್ಪಸಂಖ್ಯಾತರ ಸಮುದಾಯದ ಬಿಇಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ : ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಬಿಇಡಿ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಯ ಅವಧಿಯನ್ನು ಜ.20 ರ ವರೆಗೆ ವಿಸ್ತರಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ಅಲ್ಪಸಂಖ್ಯಾತ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖ ಮತ್ತು ಪಾರ್ಸಿ) ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ಅಭ್ಯರ್ಥಿಗಳು ಸೇವಾಸಿಂಧು ಪೋರ್ಟಲ್ https://sevasindu.karnataka.gov.in ಮೂಲಕ ಅರ್ಜಿ ಸಲ್ಲಿಸಿ, ಅಗತ್ಯ ದಾಖಲಾತಿಗಳೊಂದಿಗೆ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ಕಾಲೇಜು ಇರುವ ತಾಲ್ಲೂಕಿನ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ ಸಲ್ಲಿಸಬೇಕು.

**ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ಕೇಂದ್ರದ ವಿವರ:**

ಬಳ್ಳಾರಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ಮೊ.8310321101), ಸಂಡೂರು ತೋಟಗಾರಿಕೆ ಇಲಾಖೆಯಲ್ಲಿನ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ (ಮೊ.9036925966, 8660575061), ಸಿರುಗುಪ್ಪದ ಬಳ್ಳಾರಿ ರಸ್ತೆಯ ನಗರಸಭೆ ಆವರಣದ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ(ಮೊ.9148889975) ಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಸಹಾಯವಾಣಿ ಸಂಖ್ಯೆ ಮೊ.8277799990 (24/7) ಗೆ ಸಂಪರ್ಕಿಸಬಹುದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಿಭಾವಂತ ಕ್ರೀಡಾಪಟುಗಳಿಗೆ ನಗದು ಬಹುಮಾನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ವಿವಿಧ ಕ್ರೀಡೆಗಳಲ್ಲಿ ರಾಜ್ಯ, ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪದಕ ವಿಜೇತರಾದ ಪ್ರತಿಭಾವಂತ ಕ್ರೀಡಾಪಟುಗಳಿಗೆ ನಗದು ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಸಹಿತ 2024–25ನೇ ಸಾಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಅಧಿಕೃತ ಕ್ರೀಡಾ ಸಂಸ್ಥೆಗಳು ಆಯೋಜಿಸುವ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ಪಡೆದ ಕೊಪ್ಪಳ ಜಿಲ್ಲೆಯ ಪ್ರತಿಭಾವಂತ ಕ್ರೀಡಾಪಟುಗಳಿಗೆ ಧನ ಸಹಾಯ ನೀಡಲಾಗುತ್ತಿದ್ದು, ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪದಕ ವಿಜೇತರಾದ ಪ್ರತಿಭಾವಂತ ಕ್ರೀಡಾಪಟುಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಅರ್ಜಿ ಸಲ್ಲಿಸಲಿಚ್ಛೀಸುವ ಕ್ರೀಡಾಪಟುಗಳು ತಮ್ಮ ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಜನವರಿ 24 ರೊಳಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಜಿಲ್ಲಾ ಕ್ರೀಡಾಂಗಣ, ಕೊಪ್ಪಳ ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಥ್ಲೆಟಿಕ್ಸ್ ತರಬೇತುದಾರರಾದ ವಿಶ್ವನಾಥ ಕರ್ಲಿ ಮೊ.ಸಂ: 9620084611 ಇವರಿಗೆ ಸಂಪರ್ಕಿಸುವಂತೆ ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.